# ಹೀರೊಗಳ ಹಾಸ್ಯೋತ್ಸವ






ಬಾಲಿವುಡ್‌ನಲ್ಲಿ ಈಗ ಹಾಸ್ಯಚಿತ್ರಗಳ ಕಾಲ ಎನ್ನಬಹುದು. ಮುಂದಿನ ಎರಡು ವಾರಗಳಲ್ಲಿ ಒಟ್ಟು ಐದು ಹಾಸ್ಯ ಚಿತ್ರಗಳು ಬಿಡುಗಡೆ ಕಾಣಲಿವೆ. ಕಳೆದ ಎರಡು ವರ್ಷಗಳಿಂದ 'ಮುಟ್ಟಿದ್ದೆಲ್ಲ ಚಿನ್ನ'ವಾಗುತ್ತಿರುವ ಅಕ್ಷಯ ಕುಮಾರ್ ಅಭಿನಯದ ಹೊಸ ಚಿತ್ರ 'ಹೌಸ್‌ಫುಲ್ 4' ಇವುಗಳಲ್ಲಿ ಪ್ರಮುಖವಾದದ್ದು.

'ಹೌಸ್‌ಫುಲ್' ಚಿತ್ರಗಳ ಸರಣಿ ಆರಂಭವಾಗಿ 9 ವರ್ಷಗಳೇ ಕಳೆದಿವೆ. 'ಹೌಸ್‌ಫುಲ್' ಎನ್ನುವ ಮೊದಲ ಕಾಮಿಡಿ ಚಿತ್ರ ಬಂದದ್ದು 2010ರಲ್ಲಿ. ಇದೀಗ ಬಂದಿರುವುದು ಈ ಸರಣಿಯ ನಾಲ್ಕನೇ ಚಿತ್ರ. ಈ ಚಿತ್ರದಲ್ಲಿ ಅಕ್ಷಯ್ ಜೊತೆಗೆ ಇನ್ನೂ ಇಬ್ಬರು ಹೀರೊಗಳಿದ್ದಾರೆ– ಬಾಬಿ ಡಿಯೊಲ್ ಮತ್ತು ರಿತೇಶ್ ದೇಶ್‌ಮುಖ್. ಭರಪೂರ ಮನರಂಜನೆಯ ಕಥೆಯಿರುವ ಚಿತ್ರಕ್ಕೆ ನಿರ್ಮಾಪಕರು ಸುರಿದದ್ದು ಕೇವಲ ರೂ 78 ಕೋಟಿಯಂತೆ! ಈ ಹಿಂದಿನ 'ಹೌಸ್‌ಫುಲ್' ಚಿತ್ರಗಳಲ್ಲಿ ಕಥೆಗಿಂತ ಹೆಚ್ಚಾಗಿ ತರ್ಕರಹಿತ ಮನರಂಜನೆಗೆ ಒತ್ತು ನೀಡಿದ್ದರೂ ಅವೆಲ್ಲವೂ ಹೌಸ್‌ಫುಲ್ ಆಗಿ ಓಡಿರುವುದು ನಿರ್ಮಾಪಕರು ಈಗ ಮತ್ತೊಂದು ಚಿತ್ರ ಮಾಡಲು ಕಾರಣ. ಟ್ರೇಲರ್‌ಗಳನ್ನು ನೋಡಿದರೆ ಈ ಚಿತ್ರವೂ ಬಾಕ್ಸಾಫೀಸ್‌ನಲ್ಲಿ ದುಡ್ಡು ಬಾಚುವಂತೆ ಕಾಣುತ್ತದೆ. ಅದರಲ್ಲೂ ಚಿತ್ರದ 'ಏಕ್ ಚುಮ್ಮಾ' ಎಂಬ ಹಾಡು ಈಗಾಗಲೇ ಸೂಪರ್‌ಹಿಟ್ ಆಗಿರುವುದು ಚಿತ್ರಕ್ಕೆ ಉತ್ತಮ ಓಪನಿಂಗ್ ಕೊಡುವಂತೆ ಕಾಣಿಸುತ್ತಿದೆ.

ಆಯುಷ್ಮಾನ್ ಖುರಾನಾ ಬಾಲಿವುಡ್‌ನಲ್ಲಿ ಜನಪ್ರಿಯತೆ ಸಾಧಿಸಿರುವ ಇನ್ನೊಬ್ಬ ಹೀರೊ. ಆತ ನಟಿಸಿರುವ 'ಬಾಲಾ' ತೆರೆಗೆ ಬರಲಿರುವ ಇನ್ನೊಂದು ಹಾಸ್ಯಮಯ ಚಿತ್ರ. ತಲೆಯ ಕೂದಲು ಉದುರಿಸಿಕೊಂಡು ಅರ್ಧ ಬಾಲ್ಡೀ ಆಗಿರುವ ಕಥಾ ನಾಯಕ ಪ್ರೀತಿಸಲು ಹುಡುಗಿ ಹುಡುಕುವುದೇ ಚಿತ್ರದ ಕಥೆ. ತಲೆಕೂದಲನ್ನು ಬೆಳೆಸುವುದು ಹೇಗೆ ಎಂದು ತಲೆ ಕೆರೆಯುತ್ತಲೇ ಹಲವು ಪ್ರಯೋಗಗಳಿಗೆ ತನ್ನನ್ನು ಒಡ್ಡಿಕೊಳ್ಳುವ ಹೀರೊ ಪಡುವ ಪಡಿಪಾಟಲು ಅಷ್ಟಿಷ್ಟಲ್ಲ. ಇತ್ತೀಚೆಗೆ ವಿಭಿನ್ನ ಪಾತ್ರಗಳಲ್ಲಿ ತನ್ನ ಅಭಿನಯ ಪ್ರತಿಭೆಯಿಂದ ಮಿಂಚುತ್ತಿರುವ ಖುರಾನಾ, ಈ ಚಿತ್ರದಲ್ಲಿ ಪ್ರೇಕ್ಷಕರು ಬಿದ್ದು ಬಿದ್ದು ನಗುವಂತೆ ನಟಿಸಿದ್ದಾರಂತೆ. ಟ್ರೇಲರ್ ನೋಡಿದರೆ ನಮ್ಮ ಕನ್ನಡದ 'ಒಂದು ಮೊಟ್ಟೆಯ ಕಥೆ' ಸ್ಫೂರ್ತಿ ಇದ್ದಂತೆ ಕಾಣುತ್ತಿದೆ.

ಇನ್ನೊಂದೆಡೆ ರಾಜ್‌ಕುಮಾರ್ ರಾವ್ ಮತ್ತು ಮೌನಿ ರಾಯ್ ನಟಿಸಿರುವ 'ಮೇಡ್ ಇನ್ ಚೈನಾ' ತೆರೆಗೆ ಬರುತ್ತಿದೆ. ಗುಜರಾತಿ ವ್ಯಾಪಾರಿಯೊಬ್ಬ ಚೀನಾ ದೇಶದಲ್ಲಿ ತನ್ನ ವಸ್ತುಗಳನ್ನು ಮಾರಾಟ ಮಾಡಲು ಪಡುವ ಭಗೀರಥ ಯತ್ನಗಳು ನಗೆ ಹುಟ್ಟಿಸುವುದೇ ಈ ಚಿತ್ರದ ಹೂರಣ. ಚೀನೀ ಭಾಷೆ ಬರದ ಕಥಾನಾಯಕ ಅದನ್ನು ಕಲಿಯುತ್ತಲೇ ಪ್ರೇಕ್ಷಕರಲ್ಲಿ ನಗೆ ಉಕ್ಕಿಸುತ್ತಾನೆ.

ತಾರಾ ಪ್ರಭಾವಳಿಯ ಹಂಗಿಲ್ಲದೆ, ಅಭಿನಯಕ್ಕೆ ಅವಕಾಶ ಇರುವ ಚಿತ್ರಗಳಲ್ಲಿ ನಟಿಸುತ್ತಾ ಬಾಲಿವುಡ್‌ನ ಇಬ್ಬರು ನಟಿಯರೆಂದರೆ ತಾಪ್ಸೀ ಪನ್ನು ಮತ್ತು ಭೂಮಿ ಪೆಡ್ನೇಕರ್. ಇವರಿಬ್ಬರೂ ಬಂದೂಕುಧಾರಿಣಿಯರಾಗಿ ಕಾಣಿಸಿಕೊಂಡಿರುವ ಹೊಸ ಚಿತ್ರ 'ಸಾಂಡ್ ಕಿ ಆಂಖ್'. ಉತ್ತರ ಪ್ರದೇಶದ ಇಬ್ಬರು ಕ್ರಿಮಿನಲ್ ಗನ್‌ಮ್ಯಾನ್‌ಗಳ ನಿಜ ಘಟನೆಗಳನ್ನು ಆಧರಿಸಿ ಚಿತ್ರದ ಕಥೆ ಹೆಣೆಯಲಾಗಿದೆ. ಆದರೆ ಇಲ್ಲಿ ಬಂದೂಕುಧಾರಿಗಳ ಬದಲು ಬಂದೂಕುಧಾರಿಣಿಯರಿದ್ದಾರೆ. ತಾಪ್ಸೀ ಮತ್ತು ಭೂಮಿ ಇಬ್ಬರೂ ಈ ಚಿತ್ರದಲ್ಲಿ 50 ದಾಟಿದ ಮುದುಕಿಯರ ಪಾತ್ರದಲ್ಲಿ ನಟಿಸಿರುವುದು ವಿಶೇಷ. ಈ ಚಿತ್ರಕ್ಕೆ ಹಿಂದೆ 'ವುಮೇನಿಯಾ' ಎಂದು ಹೆಸರಿಡಲಾಗಿತ್ತು. ಆದರೆ ಆ ಟೈಟಲ್ ಪ್ರೀತಿಶ್ ನಂದಿ ಚಿತ್ರಸಂಸ್ಥೆಯ ಹಕ್ಕುಸ್ವಾಮ್ಯಕ್ಕೆ ಒಳಪಟ್ಟಿದ್ದರಿಂದ ಹೆಸರನ್ನು 'ಸಾಂಡ್ ಕಿ ಆಂಖ್' ಎಂದು ಬದಲಿಸಲಾಗಿದೆ.

ಒಟ್ಟಾರೆ ದೀಪಾವಳಿಯ ಸಂಭ್ರಮದ ಹಿನ್ನೆಲೆಯಲ್ಲಿ ಬಿಡುಗಡೆಯಾಗುತ್ತಿರುವ ಈ ಮೂರೂ ಚಿತ್ರಗಳು ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲಿಸುವುದು ಖಚಿತ ಎಂದು ಬಾಲಿವುಡ್ ನಂಬಿಕೊಂಡಿದೆ. ಈ ಮಧ್ಯೆ 'ಮೇಕ್ ಇನ್ ಇಂಡಿಯಾ' ಮತ್ತು 'ಲೈಫ್ ಮೆ ಟೈಮ್ ನಹೀ ಹೈ ಕಿಸೀ ಕೊ' ಎನ್ನುವ ಇನ್ನೆರಡು ಸಣ್ಣ ಬಜೆಟ್‌ನ ಚಿತ್ರಗಳೂ ಹಾಸ್ಯವನ್ನೇ ನಂಬಿ ಬಿಡುಗಡೆ ಕಾಣುತ್ತಿವೆ. ಇವುಗಳ ಮಧ್ಯೆ ಬಿಡುಗಡೆಯಾಗುತ್ತಿರುವ ಇತರ ರೊಮ್ಯಾಂಟಿಕ್ ಚಿತ್ರಗಳ ಸುದ್ದಿಯೇ ಕೇಳುತ್ತಿಲ್ಲ.

■ ಬಿಂದು

